ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಕಾರ್ಖಾನೆಗಳ ಕಾಯ್ದೆ 1948 ಅನ್ವಯವಾಗುವ ಕಾರ್ಖಾನೆಗಳ ಸಂಖ್ಯೆ: 7169

ಆ) ಕಾರ್ಮಿಕರ ಸಂಖ್ಯೆ: 717665

ಇ) ಬೆಂಗಳೂರು ನಗರ ಜಿಲ್ಲೆಯಲ್ಲಿ ಡಾ: ಸರೋಜಿನಿ ಮಹಿಷಿ ವರದಿ ಅನುಷ್ಠಾನದ ಪ್ರಕಾರ 50 ಮತ್ತು 50ಕ್ಕಿಂತ ಹೆಚ್ಚು ಕಾರ್ಮಿಕರಿರುವ ಎಲ್ಲಾ ವರ್ಗದ ಕೈಗಾರಿಕಾ ಘಟಕಗಳು 654 ಇದ್ದು, ಒಟ್ಟಾರೆಯಾಗಿ 181522 ಕಾರ್ಮಿಕರಿರುತ್ತಾರೆ. ಈ ಪೈಕಿ 174048 ಕಾರ್ಮಿಕರು ಕನ್ನಡಿಗರಾಗಿರುತ್ತಾರೆ.

ಈ) ಇಲಾಖೆಯ ಅಧಿಕಾರಿಗಳು ಅವರವರ ಕಾರ್ಯವ್ಯಾಪ್ತಿಯಲ್ಲಿ ಇದೂವರೆವಿಗೂ ಸರೋಜಿನಿ ಮಹಿಷಿ ವರದಿ ಅನ್ವಯವಾಗುವ 237 ಕಾರ್ಖಾನೆಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸಿದ್ದು, ಸದರಿ ಕಾರ್ಖಾನೆಗಳಲ್ಲಿ 81889 ಕಾರ್ಮಿಕರ ಪೈಕಿ 69067 ಕನ್ನಡ ಕಾರ್ಮಿಕರು ಇರುತ್ತಾರೆ. ಉಳಿದ ಕಾರ್ಖಾನೆಗಳಲ್ಲಿ ಸಮೀಕ್ಷೆ ಮುಂದುವರೆದಿದೆ.

ಮಾರ್ಗಸೂಚಿ ದರ ಏರಿಕೆ

930 (468); ಶ್ರೀ ಗೋಪಾಲ ಪೂಜಾರಿ.ಕೆ (ಬೈಂದೂರು)

ಅ) ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯಲ್ಲಿನ ಜಮೀನು ಮತ್ತು ನಿವೇಶನ ದರಗಳನ್ನು ಏರಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಶೇಕಡಾ ಎಷ್ಟು ಏರಿಸಲಾಗಿದೆ;

ಇ) ಈ ರೀತಿ ಏರಿಸಲು ಕಾರಣಗಳೇನು:

ಈ) ಇದರಿಂದ ಹೆಚ್ಚುವರಿಯಾಗಿ ವಸೂಲಾಗುವ ನೋಂದಣಿ ಮತ್ತು ಮುದ್ರಾಂಕದ ಹಣವೆಷ್ಟು?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಹೌದು.

ಆ) ಶೇಕಡಾ 5 ರಿಂದ 30 ರವರೆಗೆ ಹೆಚ್ಚಳವಾಗಿರುತ್ತದೆ.

ಇ)

1. ಕರ್ನಾಟಕ ಮುದ್ರಾಂಕ (ಕೇಂದ್ರ ಮೌಲ್ಯಮಾಪನ ಸಮಿತಿ ಮತ್ತು ಇತರೆ) ನಿಯಮಗಳು 2003 ರ ನಿಯಮ 5 ರ ಪ್ರಕಾರ ಪ್ರತಿ ವರ್ಷವು ಮಾರುಕಟ್ಟೆ ಮೌಲ್ಯವನ್ನು ಪರಿಷ್ಕರಿಸಲಾಗಿದೆ.
2. ಚಾಲ್ತಿಯಲ್ಲಿರುವ ಅಂದಾಜು ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯಗಳಲ್ಲಿ ಏರಿಕೆಯಾಗಿರುವ ಅಂಕಿಅಂಶಗಳು, ಭೂ–ಮಾಲಿಕರು/ ಅಭಿವೃದ್ಧಿದಾರರು ನಿಗಧಿಪಡಿಸಿರುವ ಮೌಲ್ಯ ಹಾಗೂ ಜಾಲತಾಣದಲ್ಲಿ ಸದರಿಯವರು ಪ್ರಕಟಿಸಿರುವ ಮೌಲ್ಯಗಳ ಆಧಾರ ಮತ್ತು ನೋಂದಣಿ ಕಛೇರಿಗಳಲ್ಲಿ ಹೆಚ್ಚಿನ ದರಕ್ಕೆ ನೋಂದಣಿ ಆಗಿರುವ ದಸ್ತಾವೇಜುಗಳ ಅಂಕಿಅಂಶಗಳ ಆಧಾರದ ಮೇಲೆ ದರಗಳನ್ನು ಏರಿಸಲಾಗಿದೆ.

ಈ) ಮಾರ್ಗಸೂಚಿಯಂತೆ ಚಾಲ್ತಿಯಲ್ಲಿರುವ ದಿನಾಂಕ: 13–11–2014 ರಿಂದ 30–11–2014 ರವರೆಗೆ ನೋಂದಣಿಯಾಗಿರುವ ಕ್ರಯ ಪತ್ರ ದಸ್ತಾವೇಜುಗಳ ಅಡಿಯಲ್ಲಿ ಸುಮಾರು ₹ 5.65 ಕೋಟಿಗಳನ್ನು ಮುದ್ರಾಂಕ ಮತ್ತು ನೋಂದಣಿ ಶುಲ್ಕದಲ್ಲಿ ಹೆಚ್ಚಳವಾಗಿರುತ್ತದೆ.

ಡಿಸೆಂಬರ್ 2014 ರಿಂದ ಮಾರ್ಚ್ 2015 ರವರೆಗೆ ₹ 554.00 ಕೋಟಿಗಳಷ್ಟು ಹೆಚ್ಚುವರಿ ರಾಜಸ್ವ ಸಂಗ್ರಹವಾಗುವುದೆಂದು ಅಂದಾಜು ಮಾಡಲಾಗಿದೆ.